# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು : ಶ್ರೀ ವೈ. ಎಂ. ಸತೀಶ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 670 (706)

ಉತ್ತರಿಸಬೇಕಾದ ಸಚಿವರು : ಕೃಷಿ ಸಚಿವರು

ಉತ್ತರಿಸಬೇಕಾದ ದಿನಾಂಕ : 12-12-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಔಷಧಿಗಳ ತಯಾರಿಕೆಗೆ ಬೇಕಾಗುವ ಸಸ್ಯಗಳ ಕೃಷಿಯನ್ನು ಮಾಡುವ ಮೀಸಲು ಪ್ರದೇಶಗಳು ಇವೆಯೇ; (ಮಾಹಿತಿ ಒದಗಿಸುವುದು) | ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ವ್ಯಾಪ್ತಿಯಲ್ಲಿ ಸುಮಾರು 30 ಎಕರೆ ವಿಸ್ತೀರ್ಣದ ಔಷಧಿ ಮತ್ತು ಸುಗಂಧ ದ್ರವ್ಯ ಬೆಳೆಗಳ ಪ್ರಾತ್ಯಕ್ಷಿಕೆ ತಾಕುಗಳನ್ನು ಹೊಂದಿದ್ದು, ಮೂಲ ಧ್ಯೇಯೋದ್ದೇಶಗಳಾದ ಸಂಗ್ರಹಣೆ, ಸಂರಕ್ಷಣೆ ಮತ್ತು ಸಸ್ಯಾಭಿವೃದ್ಧಿಯ ಮೂಲಕ ರೈತರಿಗೆ ಅಗತ್ಯವಿರುವ ಗುಣಮಟ್ಟದ ಬೀಜ/ಸಸಿಗಳನ್ನು ಉತ್ಪಾದಿಸುವಲ್ಲಿ ಮುಂಚೂಣಿಯಲ್ಲಿದೆ. ಉತ್ತಮ ಇಳುವರಿ ಮತ್ತು ಗುಣಮಟ್ಟ ತಳಿಗಳ ಅಭಿವೃದ್ಧಿ ಹಾಗೂ ಬೇಸಾಯ ತಂತ್ರಜ್ಞಾನಗಳ ಅವಿಷ್ಕಾರ ಮತ್ತು ಪರಿಷ್ಕರಣೆಯಲ್ಲಿ ತೊಡಗಿಸಿಕೊಂಡಿದ್ದು, ಅಗತ್ಯವಿರುವ ರೈತರಿಗೆ ಹಾಗೂ ಫಲಾನುಭವಿವಗಳಿಗೆ ತರಬೇತಿಗಳನ್ನು ನೀಡಲಾಗುತ್ತಿದೆ. |
| ಆ | ರಾಜ್ಯದಲ್ಲಿ ಔಷಧಕ್ಕೆ ಬಳಕೆ ಮಾಡುವ ಕೃಷಿಗಳನ್ನು ಪಟ್ಟಿ ಮಾಡಲಾಗಿದೆಯೇ; ಹಾಗಿದ್ದಲ್ಲಿ ಅದರ ಪಟ್ಟಿಯನ್ನು ಮತ್ತು ವಿವರಗಳ ಮಾಹಿತಿ ಒದಗಿಸುವುದು; | ರಾಜ್ಯದಲ್ಲಿ ಜೌಷಧಕ್ಕೆ ಬಳಕೆ ಮಾಡುವ ಸಸ್ಯಗಳನ್ನು ಕೃಷಿ ವಿಶ್ವವಿದ್ಯಾಲಯಗಳ ಹಂತದಲ್ಲಿ ಪಟ್ಟಿ ಮಾಡಲಾಗಿದೆ. ಪ್ರಮುಖವಾಗಿ ಮಲೆನಾಡು ಭಾಗದಲ್ಲಿ ದೇಶೀಯವಾಗಿ ಈ ಕೆಳಕಂಡ ಸಸ್ಯಗಳನ್ನು ಔಷಧಿ ಸಸ್ಯಗಳೆಂದು ಗುರುತಿಸಲಾಗಿದೆ.<br>1. ಅಗ್ನಿ ಶಿಖೆ, 2.ಲಕ್ಕಿಗಿಡ, 3.ಅಳಲೆಕಾಯಿ, 4.ಅರ್ಜುನಗಿಡ, 5.ಸರ್ಪಗಂಧ, 6.ಒಂದೆಲಗ, 7. ದೊಡ್ಡಪತ್ರ, 8.ಸಿಕಾ ಅಶೋಕ, 9. ಪುನರ್ಪಳಿ, 10.ಅಮೃತಬಳ್ಳಿ, 11.ಮಧುನಾಶಿನಿ, 12.ಅಡುಮುಟ್ಟದ ಗಿಡ, 13. ಮಾವಿನಕಾಯಿ ಶುಂಠಿ, 14. ಕಪ್ಪು ಅರಿಷಿಣ, 15.ಇನ್ಸುಲಿನ್ ಗಿಡ, 16. ಅಲ್ ಪಿನಿಯ, 17. ದುರ್ವಸನೆ ಮರ, 18. ಕಾಸರಕ, 19. ಬಿಳಿದೇವದಾಸು, 20. ಹಿಪ್ಪೆ, 21. ಮೆಂಕುಳ್ಳಿ, 22. ಉಪ್ಪಾಗೆ, 23. ಸಾಲುದೂಪ, 24.ನಾಗಸಂಪಿಗೆ, 25.ಸುರಹೊನ್ನೆ, 26. ಮದ್ದರಸ, 27.ಸಪ್ತಪರ್ಣಿ, 28. ಬಿಲ್ವಪತ್ರೆ, 29.ದೇವಕಣಗಿಲೆ, 30.ಕದಂಬ ವೃಕ್ಷ, 31.ಎಕ್ಕೆ, 32.ನುರ್ಕಲು, 33.ಅಣ್ಣಿಸೊಪ್ಪು, 34. ಅಂಟುವಾಳ, 35. ನಸುಗುನ್ನಿಕಾಯಿ. |
| ಇ | ರಾಜ್ಯದ ಪಶ್ಚಿಮ ಘಟ್ಟಗಳಲ್ಲಿ ಔಷಧಿಗಳಿಗೆ ಬಳಕೆ ಮಾಡುವ ಬೆಳೆಗಳು ಇದ್ದು, ಅವುಗಳನ್ನು ಉತ್ತೇಜಿಸಲು ಸರ್ಕಾರದ/ಇಲಾಖೆಯ ಕ್ರಮಗಳೇನು? (ಮಾಹಿತಿ ಒದಗಿಸುವುದು) | ಕರ್ನಾಟಕ ಪಶ್ಚಿಮ ಘಟ್ಟಗಳಲ್ಲಿ ಅಳಿವಿನಂಚಿನಲ್ಲಿರುವ ಆಯ್ದ ಔಷಧೀಯ ಸಸ್ಯಗಳ ಸಂರಕ್ಷಣೆ ಪ್ರಸರಣ ಮತ್ತು ಸಂತಾನಾಭಿವೃದ್ಧಿ ಕುರಿತು ವಿಶ್ವವಿದ್ಯಾಲಯದಿಂದ ಸಂಶೋಧನೆಗಳನ್ನು ಕೈಗೊಂಡಿರುತ್ತೇವೆ. ಔಷಧಿ ಗಿಡಗಳ ಸಂರಕ್ಷಣೆ ಮತ್ತು ಮಹತ್ವದ ಕುರಿತು ಶಾಲಾ ಮಕ್ಕಳಿಗೆ, ಸ್ತ್ರೀಶಕ್ತಿ, ಗುಂಪುಗಳಿಗೆ ಹಾಗೂ ರೈತರಿಗೆ ಅರಿವು ಮೂಡಿಸಲು ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |

ಇ-ಸಂಖ್ಯೆ: AGRI/102/AUM/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು